Crl. Misc. ನಂ. 95-2019

ದಿನಾಂಕಃ 21-06-2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

**ಪಾಟೀ ಸವಾಲು ಃ ಎದುರದಾರರ ಪರವಾಗಿ ಶ್ರೀ. ಎಮ್.ಸಿ. ಎಚ್. ವಕೀಲರಿಂದಃ**

1. ಎದುರುದಾರರ ನನ್ನ ಹಾಗೂ ನನ್ನ ಮಕ್ಕಳ ಮೇಲೆ ನೀಡಿದ ದೂರಿನ ವಿಚಾರಣೆಗೆ ಕುರಿತಂತೆ ಪೊಲೀಸರು ನಮ್ಮನ್ನು ಠಾಣೆಗೆ ಕರೆಸಿರುವುದಿಲ್ಲ. ನಮ್ಮನ್ನು ಠಾಣೆಗೆ ಕರೆಸಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ನನಗೆ ನೆನಪಿಲ್ಲಾ. ನೆನಪಿಲ್ಲಾ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ದೂರಿನ ಪರಿಣಾಮ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಿಸಿದಂತೆ ನಾನಾಗಲಿ ಅಥವಾ ಮಕ್ಕಳಾಗಲಿ ನಗರ ಪೊಲೀಸ ಠಾಣೆಗೆ ಹೋಗಿರುವುದಿಲ್ಲ.

2. ಎದುರುದಾರರು ಲೆನಿಂಗ್ ರಸ್ತೆಯ ಮನೆಯಲ್ಲಿ ವಾಸವಿದ್ದರು. ಟೌನ್ ಶೀಫ ಮನೆಯಲ್ಲಿ ವಾಸವಿರಲಿಲ್ಲ. ಅರ್ಜಿಯನ್ನು ಸಲ್ಲಿಸಲು ನಾನೇ ವಕೀಲರಿಗೆ ಮಾಹಿತಿಯನ್ನು ನೀಡಿರುತ್ತೇನೆ. ಅರ್ಜಿಯನ್ನು ಸಲ್ಲಿಸುವ 2 ವರ್ಷ ಪೂರ್ವದಿಂದಲೇ ಎದುರುದಾರರು ಮೈಸೂರಿನಲ್ಲಿ ವಾಸವಿರುತ್ತಾರೆಂದರೆ ಸಾಕ್ಷಿಯು ಅವರು ನಿವೃತ್ತಿ ಹೊಂದಿದ್ದ 2- 3 ವರ್ಷಗಳ ಬಳಿಕ ಮೈಸೂರಿನಲ್ಲಿ ಹೋಗಿ ವಾಸವಿರುತ್ತಾರೆ. ಈಗಲೂ ಸಹ ಅಲ್ಲಿಯೇ ವಾಸವಿದ್ದಾರೆ. ಎದುರುದಾರರು ಟೌನಶೀಫನ ಮನೆಯಲ್ಲಿ ವಾಸವಿರುತ್ತಾರೆಂದು ವಕೀಲರಿಗೆ ನಾನು ತಿಳಿಸಿಲ್ಲ. ಅವರು ಟೌನಶೀಫನ ಮನೆಯಲ್ಲಿ ವಾಸವಿರುತ್ತಾರೆಂದು ಅರ್ಜಿಯಲ್ಲಿ ತಿಳಿಸಿಲ್ಲ. ಟೌನಶೀಫನ ಮನೆಯಲ್ಲಿ ನನ್ನ 2 ನೇ ಮಗ ವಿಠ್ಠಲರವರು ವಾಸವಿರುತ್ತಾರೆ. ನಾನು ಉದ್ದೇಶಪೂರ್ವಕವಾಗಿ ತಪ್ಪು ವಿಳಾಸವನ್ನು ತೋರಿಸಿ, 2 ನೇ ಮಗನೊಂದಿಗೆ ಸಂಬಂಧ ಸರಿಯಿಲ್ಲದೇ ಇದ್ದರೂ ಸಹ ಅವರಿಗೆ ನೋಟೀಸನ್ನು ಜಾರಿ ಮಾಡಿಸಿ, ಮಧ್ಯಂತರ ಆದೇಶವನ್ನು ಪಡೆದುಕೊಂಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ.

3. ನನ್ನ ಮಗಳು ಸತ್ಯವತಿ ಹಾಗೂ ಎದುರುದಾರರು ನಮ್ಮ ಮನೆಗೆ ಬಂದಾಗ, ಅವರನ್ನು ಒಳಗೆ ಬರಲು ಬಿಟ್ಟಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಈ ಹಿಂದೆ ಮನೆಗೆ ಬಂದಾಗ, ನಮ್ಮನ್ನು ಕೈ ಹಿಡಿದು ಏಳೆದು ಮನೆಯಿಂದ ಹೊರಗೆ ಹೋಗು ಎಂದು ಹೇಳಿ ಮನೆಯ ಕಿಟಕಿಗಳನ್ನು ಓಡೆದಿದ್ದರಿಂದ , ಸದ್ರಿ ಭಯದಿಂದ ಅವರನ್ನು ಒಳಗೆ ಬರಲು ಬಿಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದ್ರಿ ವಿಷಯಕ್ಕೆ ಸಂಬಂಧಿಸಿದಂತೆ ಎದುರುದಾರರು ಪೊಲೀಸರ ಠಾಣೆಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಲೇನಿಂಗ್ಸ ರಸ್ತೆಯಲ್ಲಿ ಇರುವ ಮನೆ ಎದುರುದಾರರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಹೆಸರಿಗೆ ಯಾವ ಕಾಲಕ್ಕೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

4. ವಕೀಲರ ಮೂಲಕ ಎದುರುದಾರರು ನನಗೆ ಒಂದು ನೋಟೀಸನ್ನು ಕಳಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನೋಟೀಸ ತಲುಪಿದ್ದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದ್ರಿ ನೋಟೀಸಗೆ ಉತ್ತರವನ್ನು ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 06-12-2017 ರಲ್ಲಿ ಎದುರುದಾರರು ಹಿರಿಯ ಮಗಳು ಸತ್ಯವ್ವರವರಿಗೆ ನೊಂದಾಯಿತ ದಾನ ಪತ್ರದ ಮೂಲಕ ಲೈನಿಂಗ್ಸ ರಸ್ತೆಯಲ್ಲಿರುವ ಮನೆಯನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದ ಸದ್ರಿ ಮನೆ ಅವರ ಹೆಸರಿಗೆ ಆಗಿರುವುದು ನನಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾನ ಪತ್ರವಾದ ವಿಷಯ ನನಗೆ ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

5. ಎದುರುದಾರರ ನಮ್ಮ ಒಂದಿಗೆ ಇರುವಾಗ , ನಮ್ಮ ಊಟ, ಬಟ್ಟೆ, ಔಷಧ, ವಸತಿ ಎಲ್ಲಾವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಅಂತೆಯೇ ಎದುರುದಾರರು ನಮಗೆ ಅರ್ಧ ಕೆ. ಜಿ

ಬಂಗಾರವನ್ನು ಮಾಡಿಕೊಟ್ಟಿರುತ್ತಾರೆ ಎಂದರೆ ಕೆಲವು ಬಂಗಾರವನ್ನು ಹೊರತುಪಡಿಸಿ, ಎಲ್ಲಾವನ್ನು ಅವರೇ ತೆಗೆದುಕೊಂಡು ಹೋಗಿರುತ್ತಾರೆ. ಎಲ್ಲಾ ಬಂಗಾರ ನನ್ನ ಬಳಿ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎದುರುದಾರರಿಗೆ ರಕ್ತದೊತ್ತಡದ ಕಾಯಿಲೆ ಇತ್ತು ಎಂದರೆ ಸರಿಯಲ್ಲ. ಅವರಿಗೆ 2 ಬಾರಿ ಹರ್ನಿಯಾ ಶಸ್ತ್ರ ಚಿಕಿತ್ಸೆ ಆಗಿರುತ್ತದೆ ಎಂದರೆ ಸರಿ. ಎದುರುದಾರರ ಆರೋಗ್ಯ ಈಗ ಸರಿ ಇರುವುದಿಲ್ಲ ಎಂದರೆ ವಯೋ ಸಹಜ ಆರೋಗ್ಯ ಅನಾರೋಗ್ಯದಿಂದ ಇರುತ್ತದೆ ಎಂದು ನುಡಿಯುತ್ತಾರೆ. ಈಗಲೂ ಸಹ ಅವರ ಆರೋಗ್ಯ ಸರಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರು ನಿವೃತ್ತಿ ಹೊಂದಿ ಸುಮಾರು 8 ವರ್ಷಗಳಾಗಿರುತ್ತವೆ. ಇಲ್ಲಿಯವರೆಗೆ 2 ನೇ ಮಗ ಹಾಗೂ 2 ನೇ ಮಗಳು ನನ್ನ ಹೊಟ್ಟೆ-ಬಟ್ಟೆಗೆ ಸ್ವಲ್ಪ ಹಣವನ್ನು ನೀಡುತ್ತಿದ್ದರು. ಲೆನಿಂಗ್ಸ ರಸ್ತೆಯಲ್ಲಿ ಇರುವ ಮನೆಯನ್ನು ನನ್ನ ಹಿರಿಯ ಮಗನ ಹೆಸರಿಗೆ ಬರೆದುಕೊಡುವಂತೆ ಎದುರುದಾರರಿಗೆ ಒತ್ತಡ ಹೇರುತ್ತಿದ್ದೇವು ಎಂದರೆ ಸರಿಯಲ್ಲ. ಎದುರುದಾರರಿಗೆ ಪಿಂಚಣಿ ಹಣ ಎಷ್ಟು ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಪಿಂಚಣಿ ಹಣವನ್ನು ಸಂಪೂರ್ಣವಾಗಿ ನನಗೆ ಹಾಗೂ ಹಿರಿಯ ಮಗನಿಗೆ ನೀಡುವಂತೆ ಒತ್ತಡ ಹೇರುತ್ತಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಖರ್ಚಿಗೆ ಬೇಕಾದಗ ಹಣವನ್ನು ಕೇಳುತ್ತಿದ್ದೇವು ಹಾಗೂ ಮನೆಗೆ ಬೇಕಾದ ಸಾಮಗ್ರಿಗಳನ್ನು ಅವರೇ ತಂದು ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಅವರು ಪಿಂಚಣಿ ಹಣವನ್ನು ನೀಡದೇ ಇರುವ ಕಾರಣ ಹಾಗೂ ಮನೆಯನ್ನು ಹಿರಿಯ ಮಗನ ಹೆಸರಿಗೆ ಮಾಡದೇ ಇರುವ ಕಾರಣ ಎದುರುದಾರರನ್ನು ಮನೆಯಿಂದ ಹೊರಗೆ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರೇ ನಮ್ಮನ್ನು ಖುದ್ದಾಗಿ ಬಿಟ್ಟು ಹೋಗಿರುತ್ತಾರೆಂದು ನುಡಿಯುತ್ತಾರೆ. ನಾನೇ ಅವರನ್ನು ಮನೆ ಬಿಟ್ಟು ಹೋಗದಂತೆ ಕೋರಿಕೊಂಡಿರುತ್ತೇವೆ.

**ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾ ದಂ., ದಾಂಡೇಲಿ